ಇ) ದಿನಾಂಕ:5–5–2010ರಂದು ಅಪಘಾತದ ಕಪ್ಪು ಸ್ಥಳಗಳನ್ನು ಗುರುತಿಸಲಾಗಿದೆ. ಅನುದಾನದ ಲಭ್ಯತೆಯ ಅನುಸಾರ ಕ್ರಮ ಕೈಗೊಳ್ಳಲಾಗುವುದು.

**ನೆರೆ–ಸಂತ್ರಸ್ತರಿಗೆ ಅನ್ಯಾಯ**

**664(1328) ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:**(ಕುಷ್ಟಗಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಇತ್ತೀಚೆಗೆ ನೆರೆ ಪೀಡಿತ ಪ್ರದೇಶಗಳಿಗೆ ನೀಡಬೇಕಾದ ಆಹಾರ, ಸಾಮಗ್ರಿ ಮತ್ತು ಪದಾರ್ಥಗಳನ್ನು ಸರ್ಕಾರಿ ಅಧಿಕಾರಿಗಳು ಅಕ್ರಮವಾಗಿ ಸಂಗ್ರಹಗೊಳಿಸಿ, ಮುಕ್ತ ಮಾರುಕಟ್ಟೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ ಈ ಅವ್ಯವಹಾರಗಳಲ್ಲಿ ತೊಡಗಿದ ಕಿರಿಯ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದ್ದು, ಹಿರಿಯ ಅಧಿಕಾರಿಗಳನ್ನು ಸಹಾಯಕ ಆಯುಕ್ತರು ಮತ್ತು ತಹಶೀಲ್ದಾರ್, ಲಿಂಗಸುಗೂರು ಇವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ಜಿಲ್ಲಾಡಳಿತವು ಪ್ರಸ್ತಾವನೆ ಮಂಡಿಸಿದ್ದು, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮ ಏನು;

ಇ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ವಿಳಂಬ ನೀತಿ ಅನುಸರಿಸಲು ಕಾರಣವೇನು?

**ಶ್ರೀ ಜಿ ಕರುಣಾಕರರೆಡ್ಡಿ(ಕಂದಾಯ ಸಚಿವರು)**

ಅ ನೆರೆ ಪೀಡಿತ ಪ್ರದೇಶಗಳಲ್ಲಿ ನೀಡಬೇಕಾದ ಆಹಾರ, ಸಾಮಾಗ್ರಿ ಮತ್ತು ಪದಾರ್ಥಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿರುವುದಿಲ್ಲ.

ಆ ಅವ್ಯವಹಾರದಲ್ಲಿ ತೊಡಗಿರಬಹುದೆಂಬ ಸಂಶಯದ ಮೇಲೆ ಇಬ್ಬರು ಆಹಾರ ನಿರೀಕ್ಷಕರುಗಳನ್ನು ತಕ್ಷಣ ಅಮಾನತ್ತು ಗೊಳಿಸಲಾಗಿರುತ್ತದೆ. ಸದರಿ ವಿಷಯದಲ್ಲಿ ಸಮಗ್ರ ತನಿಖೆ ಮಾಡಿ ಪೂರ್ಣ ವರದಿ ಸಲ್ಲಿಸುವಂತೆ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ರಾಯಚೂರು ಇವರಿಗೆ ಸೂಚಿಸಲಾಗಿತ್ತು. ಅದರಂತೆ ಸದರಿಯವರು ಸಮಗ್ರ ತನಿಖೆ ಕೈಗೊಂಡು ಆಹಾರ ಪದಾರ್ಥಗಳು ಮತ್ತು ಆಹಾರ ಸಾಮಾಗ್ರಿಗಳು ಮತ್ತು ಇತರೆ ಪದಾರ್ಥಗಳು ಮಾರಾಟಕ್ಕೆ ಯೋಗ್ಯವಿಲ್ಲದ ಹಾಗೂ ಗುಣಮಟ್ಟ ಕೆಟ್ಟುಹೋಗಿದ್ದರಿಂದ ಮಾರಾಟಕ್ಕೆ ಯೋಗವಿಲ್ಲದ ಪದಾರ್ಥಗಳಾಗಿರುತ್ತವೆ ಎಂದು ವರದಿ ಮಾಡಿರುತ್ತಾರೆ. ಮಾರಾಟ ಮಾಡುವ ಯಾವ ಉದ್ದೇಶವಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ. ಸಹಾಯಕ ಆಯುಕ್ತರು, ಲಿಂಗಸೂಗೂರು ಹಾಗೂ ತಹಶೀಲ್ದಾರ್, ಲಿಂಗಸೂಗೂರು ಇವರಿಗೆ ಜಿಲ್ಲಾಧಿಕಾರಿಗಳು ಕಾರಣ ಕೇಳುವ ನೋಟೀಸು ಜಾರಿ

ಮಾಡಿ ಅವರಿಂದ ವರದಿಯನ್ನು ಪಡೆಯಲಾಗಿದ್ದು. ಆದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆಯನ್ನು ಜಿಲ್ಲಾಡಳಿತದಿಂದ ಸಲ್ಲಿಸಿರುವುದಿಲ್ಲ.

ಇ ಜಿಲ್ಲಾಧಿಕಾರಿಗಳ ಪರಿಶೀಲನೆಯಲ್ಲಿದೆ.

**ಪಹಣಿಗಳ ತಿದ್ದುಪಡಿ**

**665(1333) ಶ್ರೀ ಅಮರೇಶ್**:(ಮುಳಬಾಗಿಲು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಮುಳಬಾಗಿಲು ತಾಲ್ಲೂಕಿನಲ್ಲಿ ಪಹಣಿಗಳ ತಿದ್ದುಪಡಿ ಮಾಡಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಜನಾಂಗಕ್ಕೆ ಸೇರಿದ ಜಮೀನುಗಳನ್ನು ಪರಬಾರೆ(ಮಾರಾಟ) ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿದೆ; (ವಿವರ ನೀಡುವುದು);

ಆ ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;(ವಿವರ ನೀಡುವುದು)?

**ಶ್ರೀ ಜೆ ಕರುಣಾಕರ ರೆಡ್ಡಿ(ಕಂದಾಯ ಸಚಿವರು)**